ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸಾರ್ವಜನಿಕರ ಉಪಯೋಗಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿರುವ ಸರ್ಕಾರದ ಮತ್ತು ಹೈಕೋರ್ಟಿನ ಕಾನೂನುಗಳ ಮತ್ತು ನಿಬಂಧನೆಗಳ ಕೆಲವು ಪ್ರತಿಗಳು ಪೂರೈಸಿ ಏಳೆಂಟು ವರ್ಷಗಳಾದರೂ ಕೂಡ ಅವು ಪುನಃ ಮುದ್ರಣವಾಗದಿರುವುದಕ್ಕೆ ಮತ್ತು ಸಾರ್ವಜನಿಕರಿಗೆ ಸಿಕ್ಕುವುದಕ್ಕೆ ಅವಕಾಶವಾಗಿಲ್ಲದಿರುವುದಕ್ಕೆ ಕಾರಣವೇನು?

ಡಾ॥ ಆರ್. ನಾಗನಗೌಡ.—ಈಗ ಕೆಲವು ಮುದ್ರಣವಾಗಿವೆ, ಕೆಲವನ್ನು ಪುನಃ ಮುದ್ರಿಸಲು ಕಾರ್ಯಕ್ರಮ ಕೈಗೊಳ್ಳಲಾಗಿದೆ. ಬಹಳ ಡಾಕ್ಯುಮೆಂಟುಗಳನ್ನು ಮತ್ತೆ ಮುದ್ರಿಸಿದ್ದೇವೆ.

ಶ್ರೀ ಎ. ಜಿ. ತಿಮ್ಮಪ್ಪಗೌಡ.—ತಾವು ಕೊಟ್ಟಿರುವ ಪಟ್ಟಿ ಈಚೆಗೆ ಮುದ್ರಿಸಲ್ಪಟ್ಟಿರುವ ಸಣ್ಣ ಸಣ್ಣ ಕಾನೂನುಗಳಿಗೆ ಸಂಬಂಧಪಟ್ಟಿದೆ. ಆದರೆ ನಾನು ಕೇಳಿರುವುದು ಲ್ಯಾಂಡ್ ರೆವೆನ್ಯೂ ಕೋಡ್, ಹೈಕೋರ್ಟ್ ಕೋಡ್, ಮುಂತಾದುವು ದೊರೆಯದಿರುವುದಕ್ಕೆ ಕಾರಣವೇನು ಎಂದು.

ಡಾ॥ ಆರ್. ನಾಗನಗೌಡ.—ಈಗ ಅವು ಪುನಃ ಮುದ್ರಿಸಲ್ಪಡುತ್ತಿವೆ. ಈಗ ಜ್ರೆಜರಿ ಕೋಡ್, ಪಬ್ಲಿಕ್ ವರ್ಕ್ಸ್ ಅಕೌಂಟ್ಸ್ ಕೋಡು, ಫೈನಾರ್ಷಿಯಲ್ ಅಕೌಂಟ್ಸ್ ಕೋಡು ಮುಂತಾದುವನ್ನು ಪುನಃ ಮುದ್ರಿಸಿದ್ದೇವೆ. ಎಲೆಕ್ಷ್ಷನ್ ಮ್ಯಾನ್ಯುಯಲ್, ಎಜುಕೇಷನ್ ಮ್ಯಾನ್ಯುಯಲ್, ಸೆಕ್ರೆಟೇರಿಯಟ್ ಮ್ಯಾನ್ಯುಯಲ್, ಇವೆಲ್ಲಾ 1952ರಲ್ಲಿ ಮುದ್ರಿತವಾಗಿವೆ. ಇನ್ನೂ ಕೆಲವು ಬೇಕಾಗಿರುವ ಪುಸ್ತಕಗಳನ್ನು ಆದಷ್ಟು ಬೇಗ ಒದಗಿಸುತ್ತೇವೆ.

Potato Growing in Hassan and Chikmagalur Districts.

Q.—337. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether it has come to their notice that Hassan and Chikmagalur Districts are the very important potato growing centres in India ;

(*b*) if so, what action has been taken to start a potato research centre to improve the quality and output of this crop ;

(*c*) whether Government consider to grant a cold storage plant to preserve potatoes ?

A.—Dr. R. NAGAN GOWDA (Minister for Agriculture).—

(*a*) No.

(*b*) This is being examined.

(*c*) No.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬೆಳೆಯುವ ಆಲೂಗೆಡ್ಡೆಯೆಷ್ಟು?

ಡಾ॥ ಆರ್. ನಾಗನಗೌಡ.—Comparative ಆಗಿ ಅಷ್ಟು ಇಂಪ್ರೂವ್‌ಮೆಂಟಿಲ್ಲವೆಂದು ಕಂಡುಬಂದಿದೆ. ಈಗ ಒಟ್ಟು ಸಂಸ್ಥಾನದಲ್ಲಿ 1952-53 ರಲ್ಲಿ 13 ಸಾವಿರ ಎಕರೆಗಳಲ್ಲಿ ಆಲೂಗೆಡ್ಡೆ ಬೆಳೆಯಿತ್ತು. ಆ ಪೈಕಿ ಕೋಲಾರ ಜಿಲ್ಲೆಯಲ್ಲಿ 8 ಸಾವಿರ ಎಕರೆಗೆ ಮೇಲ್ಪಟ್ಟಿತ್ತು. ಇತರ ಪ್ರಾಂತಗಳಲ್ಲಿ ಇನ್ನೂ ಅಧಿಕವಾಗಿ ಬೆಳೆಯಾಗಿದೆ. ಯು. ಪಿ. ನಲ್ಲಿ ಒಂದು ಲಕ್ಷ 66 ಎಕರೆಗಳಲ್ಲಿ ಈ ಬೆಳೆಯಾಗಿದೆ. ಕೋಲಾರ ಜಿಲ್ಲೆಯಲ್ಲಿ ಹಾಸನದ ಎರಡರಷ್ಟು ಬೆಳೆಯುತ್ತಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ—ಹಾಸನ ಜಿಲ್ಲೆಯೊಂದರಲ್ಲೇ ಎರಡು ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಬೆಲೆಬಾಳುವ ಆಲೂಗೆಡ್ಡೆಯನ್ನು ಪ್ರತಿವರ್ಷವೂ ಬೆಳೆಯುತ್ತಿಲ್ಲವೆ?

Mr. SPEAKER.—Out of 13,000 acres, in more than 8,000 acres potato is grown in Kolar District; that is what the Minister says. You can compare and contrast the figures. Any other question, Sri Thimmappa Gowda?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಆಲೂಗೆಡ್ಡೆಯು ಮುಖ್ಯವಾದ ಬೆಳೆಯಾಗಿರುವುದರಿಂದ ಇದನ್ನು ರಕ್ಷಣೆ ಮಾಡುವುದಕ್ಕೆ ಕೋಲ್ಡ್ ಸ್ಟೋರೇಜ್ ಯಂತ್ರವು ಅತ್ಯಾವಶ್ಯಕವಲ್ಲವೆ?

ಡಾ॥ ಆರ್. ನಾಗನಗೌಡ.—ಅವಶ್ಯಕ ; ಆದರೆ ಈಗ ಸ್ಕೋರೇಜಿನ ಅನುಕೂಲ ಕಲ್ಪಿಸಲು ಇನ್ನೂ ಆಲೋಚಿಸಿ ಫೈನಲೈಸ್ ಮಾಡಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆಯು ಮುಖ್ಯವಾದ ಬೆಳೆಯಲ್ಲವೆ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಡಿ. ಆರ್. ಕರಿಗೌಡ.—ಅಲ್ಲಿನ ನಾಲ್ಕು ಸಾವಿರ ಎಕರೆಗಳ ಉತ್ಪತ್ತಿಯೆಷ್ಟು ?

ಡಾ॥ ಆರ್. ನಾಗನಗೌಡ.—ಆ ಅಂಕಿ ಅಂಶ ನನ್ನಲ್ಲಿಲ್ಲ.

ಶ್ರೀ ಡಿ. ಆರ್. ಕರಿಗೌಡ.—ಸುಮಾರು ಅಲ್ಲಿ ಬೆಳೆಯುವ ಒಂದು ಕೋಟಿ ರೂಪಾಯಿಗಳ ಮಾಲು ಎರಡು ತಿಂಗಳೊಳಗಾಗಿ ಏಲೇಯಾಗದಿದ್ದರೆ ಮಳೆಗಾಲದ ಬೆಳೆ ಕೆಟ್ಟುಹೋಗುತ್ತದೆ, ಅದಕ್ಕೆ ಕೋಲ್ಡ್ ಸ್ಟೋರೇಜ್ ಆವಶ್ಯಕ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ಅದನ್ನು ಪರಿಶೀಲನ ಬೇಕು.

ಶ್ರೀ ಡಿ. ಆರ್. ಕರಿಗೌಡ.—ನಾಳೆ ನಾಳಿದ್ದರಲ್ಲಿ ನಮ್ಮ ದೇಶಕ್ಕೆ ಬೊಂಬಾಯಿನಿಂದ ರಿಸರ್ಚ್ ಆಫೀಸರು ಬರುತ್ತಾರಂಬುದು ಗೊತ್ತೆ?

ಅಧ್ಯಕ್ಷರು.—ತಮಗೆ ಗೊತ್ತಿರುವ ವಿಚಾರವನ್ನೇಕೆ ಕೇಳಬೇಕು?

ಶ್ರೀ ಕೆ. ಲಕ್ಷ್ಮಪ್ಪ.—ಕೋಲ್ಡ್ ಸ್ಟೋರೇಜ್ ಮಂಜೂರುಮಾಡಲು ಸರ್ಕಾರ ಪರ್ಯಾಲೋಚಿಸುವುದಿಲ್ಲವೆಂದು ಉತ್ತರದಲ್ಲಿ ಹೇಳಿದೆ. ಸೊಸೈಟಿ ಆ ಕೆಲಸ ಮಾಡಲು ಮುಂದೆ ಬಂದರೆ ಸರ್ಕಾರದವರು ಸಹಾಯ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—Technical Opinion ಮತ್ತು ಸಹಾಯ ಸಾಧ್ಯವಾದುದನ್ನು ಕೊಡಲು ಯೋಚನೆಮಾಡಲಾಗುತ್ತದೆ.

Sri V. MASIYAPPA.—Is there a Potato Research Station in Mysore City?

Dr. R. NAGAN GOWDA.—No.

Sri V. MASIYAPPA.—Is there not a representation for starting a Potato Research Institution and Seed Multiplication Centre, Sir.

Dr. R. NAGAN GOWDA.—Potato Research Station as such cannot be started, because the acreage that we have is not very big. But the question of starting some research work on potato will be taken into consideration.

Estimate for Irrigation Pump Sets between Pavagada and Kondethimmanahalli.

Q.—413. Sri MALI MARIYAPPA (Pavagada).—

Will the Government be pleased to state :—

(*a*) whether an estimate for installing I. P. Sets between Pavagada and Kondethimmanahalli *via* Aralahalli Davada Betta Devarekere is prepared ;

(*b*) the amount of the estimate ;

(*c*) when the same will be implemented ?

A.—Dr. R. NAGAN GOWDA (Minister for Agriculture).—

(*a*) Yes.

(*b*) Rs. 7,20,000.

(*c*) Since the cost per H. P. of the present estimate exceeds the prescribed limit of Rs. 1,000 per H. P., it will not be possible to implement the scheme now unless more applicants for power supply come forward in the area.

Sri MALI MARIYAPPA.—Are Government aware that Pavagada Taluk is often subjected to famine condition ?

Dr. R. NAGAN GOWDA.—Yes.

Sri MALI MARIYAPPA.—Are Government considering the revision of the minimum of 1,000 H. P. so far as the famine areas are concerned ?

Dr. R. NAGAN GOWDA.—Government have fixed the minimum It would be very difficult if we should alter it, because the department will not work as satisfactorily as it has to. All that I can say is, if the local people try to get more applications for using electricity, an estimation can easily be made economically.

Sri L. SIDDAPPA.—Supposing the villagers come forward to make up the dificiency, would it be possible for Government to sanction ?

Dr. R. NAGAN GOWDA.—Yes.

ಶ್ರೀ ಎಲ್. ಸಿ. ನಾಗಯ್ಯರೆಡ್ಡಿ.—ಮೊದಲು 1,500 ರೂಪಾಯಿ ಎಂದು ಗೊತ್ತುಮಾಡಿರಲಿಲ್ಲವೆ ? ಅದನ್ನು ಬದಲಾಯಿಸಿರುವುದಕ್ಕೆ ಕಾರಣವೇನು ?

ಡಾ॥ ಆರ್. ನಾಗನಗೌಡ.—ಅಂಕಿ ಅಂಶಗಳನ್ನು ಪರಿಶೀಲಿಸಿ 1,500 ರೂಪಾಯಿ ಎಂದಿದ್ದರೆ ಲಾಭದಾಯಕವಾಗುವುದಿಲ್ಲ, ಇಲಾಖೆ ಕೆಲಸಮಾಡುವುದಕ್ಕೆ ಕಷ್ಟವಾಗುತ್ತದೆ ಎಂದು ಹೀಗೆ ಮಾಡಿದ್ದೇವೆ. ಈಗಾದರೊ ಡಿಮ್ಯಾಂಡು ಬಹಳವಾಗಿದೆ ; ಇರುವ ಕರೆಂಟು ಉಪಯೋಗವಾಗುತ್ತದೆ. ಸ್ವಲ್ಪ ಆ ಲೋಕಲ್ ಏರಿಯಾದಲ್ಲಿ ಪ್ರಯತ್ನ ಮಾಡಿದರೆ ಆಗ 1,000 ರೂಪಾಯಿ ಎಂದು ಮಾಡಿರುವುದನ್ನು ಪೀಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ.

Land grant to Harijans in Nidagal Forest.

Q.—581. Sri C. T. HANUMANTHAIYA (Pavagada—Scheduled Castes).—

Will the Government be pleased to state :—

(*a*) when the Harijans of Chikka thimmanahally of Nyayathakuntemajare, Nidagal Hobli, Pavagada Taluk applied for the grant of 175 acres of land in Nidagal Forest ;

(*b*) the reason for not yet granting it for cultivation by releasing it from the forest area and bringing it under the administration of the Revenue Department ?

A.—Dr. R. NAGAN GOWDA (Minister for Agriculture).—

(*a*) No petition has been received.

(*b*) Does not arise.

ಶ್ರೀ ಸಿ. ಟಿ. ಹನುಮಂತಯ್ಯ.—ಇದಕ್ಕೆ ರಿಕಾರ್ಡಾಗಿ ಬಂದು ಸರ್ಕಾರದಲ್ಲಿದೆ. ಅದನ್ನು ವಿಚಾರ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಇದಕ್ಕೆ ಅರ್ಜಿ ನಮ್ಮಲ್ಲಿ ಬಂದಿಲ್ಲವಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಬಂದಿದೆ ; ನನಗೆ ಆನಮಾಚಾರ ಗೊತ್ತಿದೆ ಸ್ಕೆಚ್ಚು, ಮಹಜರು ಪ್ರತಿಯೊಂದೂ ಆಗಿ ರೇಂಜ್ ಆಫೀಸರಿಂದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿಗೆ ಬಂದು ಸರ್ಕಾರದಲ್ಲಿ ನಿಂತಿದೆ.

ಡಾ॥ ಆರ್. ನಾಗನಗೌಡ.—ನಮಗೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು ಯಾವುದೂ ಬಂದಿಲ್ಲವೆಂದು ತಿಳಿಸಿದ್ದಾರೆ ; ಬರೆದಿದ್ದಾರೆ.